ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳ ಪಟ್ಟಿ

ಹರಿಹರ ತಾಲ್ಲೂಕಿನ ಕಲ್ಲಹಳ್ಳಿಯಲ್ಲಿ ನೀರಿನ ದರದ ವಸೂಲಾತಿ.

೧೨೫೧. ಶ್ರೀ ಬಿ. ಜಿ. ಕೊಟ್ರಪ್ಪ (ಹರಿಹರ).—ಮಾನ್ಯ ಕಂದಾಯ ಹಾಗೂ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹರಿಹರ ತಾಲ್ಲೂಕಿನ ಕಲ್ಲಹಳ್ಳಿಯ ಕೃಷಿ ಜಮೀನಿಗೆ ನೀರನ್ನು ಕೊಡದಿದ್ದರೂ, ಕಂದಾಯ ವನ್ನು ಅಧಿಕಾರಿಗಳು, ರೈತರಿಂದ ಬಲತ್ಕಾರವಾಗಿ ವಸೂಲಿ ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ, ರೈತರಿಗೆ ಭತ್ತದ ಬೆಳೆಯಿಲ್ಲದೆ ತೊಂದರೆಯಾಗಿರುವುದರಿಂದ ಕಂದಾಯ ವಸೂಲಾತಿಯನ್ನು ಸರ್ಕಾರದವರು ನಿಲ್ಲಿಸುವರೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—

ಅ) ನೀರು ಸರಬರಾಜು ಇಲ್ಲದ ಕಲ್ಲಹಳ್ಳಿ ಗ್ರಾಮವು ಸೇರಿದಂತೆ ಹರಿಹರ ತಾಲ್ಲೂಕಿನ ಯಾವ ಗ್ರಾಮದಲ್ಲೂ ಹಾಲಿ ಬಲವಂತವಾಗಿ ನೀರಿನ ಕಂದಾಯ ಬಾಕಿಯನ್ನು ವಸೂಲಿ ಮಾಡುತ್ತಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಕಡೂರಂ ತಾಲ್ಲೂಕಿನಲ್ಲಿ ಕಾಡಿನ ಜಮೀನಿನ ಬಗರ್ ಹುಕ್ಕುಂ ಸಾಗುವಳಿ.

ಕಡೂರಂ ತಾಲ್ಲೂಕು ಎಮ್ಮೆದೊಡ್ಡಿ ಕಾಡಿನಲ್ಲಿನ ಬಗರ್ ಹುಕುಂ ಸಾಗುವಳಿಯನ್ನು ಸಕ್ರಮಗೊಳಿಸುವುದು

೧೨೪೫. ಶ್ರೀ ಎಸ್. ಆರ್. ಲಕ್ಷ್ಮಯ್ಯ (ಬೀರೂರು).—ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನಲ್ಲಿರುವ ಎಮ್ಮೆದೊಡ್ಡಿ ಕಾಡಿನಲ್ಲಿ ಬಗರ್ ಹುಕುಂ ಸಾಗುವಳಿ ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ; ಮತ್ತು ಎಷ್ಟು ಸಾಗುವಳಿ ಮಾಡಲಾಗಿದೆ ?

ಆ) ಹಾಗಿದ್ದಲ್ಲಿ ಸುಮಾರು ೨೦ ವರ್ಷಗಳಿಂದ ಬಗರ್ ಹುಕುಂ ಸಾಗುವಳಿ ಮಾಡುತ್ತಿರುವ ಜಮೀನನು ಸಕ್ರಮೀಕರಣಗೊಳಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಸಚಿವರು).—

ಅ) ಬಗರ್ ಹುಕುಂ ಸಾಗುವಳಿ ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆ. ಮತ್ತು ೬೩೪ ಎಕರೆ ಜಮೀನನ್ನು ಸಾಗುವಳಿ ಮಾಡಲಾಗಿದೆ ಎಂದು ತಿಳಿದು ಬಂದಿದೆ.

ಆ) ಈ ಜಮೀನುಗಳು ಮದಗದ ಕೆರೆಯ ಜಲಾನಯನ (ಕ್ಯಾಚ್‌ಮೆಂಟ್) ಪ್ರದೇಶವಾಗಿರುವುದರಿಂದ ಅವುಗಳನ್ನು ಪ್ರಕೃತ ನಿಯಮಗಳ ಪ್ರಕಾರ ಸಕ್ರಮೀಕರಿಸಲು ಬರುವುದಿಲ್ಲ.

ಖಾನಾಪುರ ತಾಲ್ಲೂಕಿನ ಭೂ ರಹಿತ ಜನತೆಗೆ ದೊಡ್ಡ ಭೂಮಿಯ ಹಂಚಿಕೆ.

೧೨೬೯. ಶ್ರೀ ವಿ. ಪಿ. ಪಾಟೀಲ್ (ಖಾನಾಪುರ).—ಮಾನ್ಯ ಕಂದಾಯ ಹಾಗೂ ಯೋಜನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಖಾನಾಪುರ ತಾಲ್ಲೂಕಿನಲ್ಲಿ ಎಷ್ಟು ಎಕರೆ ಸರ್ಕಾರಿ ಹಾಗೂ ಹೆಚ್ಚುವರಿ ಜಮೀನನ್ನು ಭೂ ರಹಿತ ಜನಗಳಿಗೆ ಹಂಚಲಾಗಿದೆ ?

ಆ) ಈ ಪೈಕಿ ಎಷ್ಟು ಎಕರೆ ಜಮೀನನ್ನು ಸಾಗುವಳಿಗೆ ಒಳಪಡಿಸಲಾಗಿದೆ ?